ಕರ್ನಾಟಕ ಸರ್ಕಾರ

ಸಂಖ್ಯೆಃಪಪೂಶಿ/ಸಿಬ್ಬಂದಿ-3/ಹೊಕಾಅ01/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ 16-02-2017.

**ಸುತ್ತೋಲೆ**

ವಿಷಯಃ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಚಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಆಡಳಿತ ಮಂಡಳಿಗಳಿಗೆ Letter of Intent (ಉದ್ದೇಶ ಪತ್ರ) ನೀಡುವ ಬಗ್ಗೆ.

ಉಲ್ಲೇಖಃ ಆಡಳಿತ ಮಂಡಳಿಗಳು ಸಲ್ಲಿಸಿರುವ ಅರ್ಜಿಗಳು.

---

1) ಶಿಕ್ಷಣ ಸಂಸ್ಥೆ / ಟ್ರಸ್ಟ್ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು Form – I ರಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯನ್ನು ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(1) ರನ್ವಯ ಈ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ.

2) ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ, ಮುಂದಿನ ಮೂರು (3) ವರ್ಷಗಳಲ್ಲಿ ಕೆಳಕಂಡ ಕ್ರಮಗಳನ್ನು ಅನುಸರಿಸುವುದು:

1. ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ (ಪ್ರತ್ಯೇಕವಾಗಿ) 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು acquire ಮಾಡಿಕೊಳ್ಳಬೇಕು.
2. ಸದರಿ ನಿವೇಶನವು ಸಂಸ್ಥೆಯ/ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿದ್ದು, ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ನಿಯಮಗಳ ಅನ್ವಯ ನೋಂದಣಿಯಾಗಿರಬೇಕು.
3. ನಿವೇಶನ / ಕಟ್ಟಡವನ್ನು ಬಾಡಿಗೆಗೆ ಪಡೆದು ಪದವಿ ಪೂರ್ವ ಕಾಲೇಜನ್ನು ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
4. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಇಚ್ಚಿಸುವ ಪೂರ್ವದಲ್ಲಿಯೇ ಸಂಸ್ಥೆ / ಟ್ರಸ್ಟ್ acquire ಮಾಡಿಕೊಂಡಿರುವ 25,000 ಚದರ ಅಡಿಗಳ ನಿವೇಶನದಲ್ಲಿ ನಿಯಮ 4(2) ಮತ್ತು 4(3) ರಂತೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶಕ್ಕಾಗಿಯೇ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪದವಿ ಪೂರ್ವ ಕಾಲೇಜಿಗಾಗಿಯೇ ಸೂಕ್ತ ಕಟ್ಟಡವನ್ನು ನಿರ್ಮಿಸುವುದು ಮತ್ತು ಸದರಿ ನಿಯಮಗಳಂತೆ ಸದರಿ ಕಟ್ಟಡದಲ್ಲಿ / ನಿವೇಶನದಲ್ಲಿ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಳ್ಳಬೇಕು.

..2

5. ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ ನಿವೇಶನ ಮತ್ತು ಕಟ್ಟಡವನ್ನು ಹೊಂದಿ, ಅದರಲ್ಲಿ ಬೋಧಿಸಲು ಅಪೇಕ್ಷಿಸುವ ಸಂಯೋಜನೆಗಳು ಮತ್ತು ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಂಡ ನಂತರ, ನಿಯಮ 4(4) ರಂತೆ ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿಯವರು ಇದರೊಂದಿಗೆ ಲಗತ್ತಿಸಿರುವ ಅನುಬಂಧದ ಮಾಹಿತಿಯೊಂದಿಗೆ ನಿಗದಿಪಡಿಸಿದ ಸಮಯದೊಳಗೆ ಸೂಕ್ತ ವಿವರಗಳು / ದಾಖಲೆಗಳೊಂದಿಗೆ ಈ ನಿರ್ದೇಶನಾಲಯಕ್ಕೆ ತಿಳಿಸಬೇಕು.
6. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು. Letter of intent ಮೂರು ವರ್ಷಗಳ ನಂತರ ತನ್ನ ಸಿಂಧುತ್ವವನ್ನು / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷಗಳೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ.
7. ಒಂದು ವೇಳೆ 2017-18ನೇ ಶೈಕ್ಷಣಿಕ ಸಾಲಿನಿಂದಲೇ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ, ಮಾಹಿತಿ ಮತ್ತು ದಾಖಲೆಗಳೊಂದಿಗೆ ಹಾಗೂ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಮಾಹಿತಿಯನ್ನು ರೂ.100/-ರ ಇ-ಸ್ಟಾಂಪ್ ಪೇಪರ್‌ನಲ್ಲಿ ನೋಟರಿ ದೃಢೀಕೃತ ಪ್ರಮಾಣ ಪತ್ರದೊಂದಿಗೆ ಪ್ರಸಕ್ತ ಸಾಲಿನ ಸಕಾಲ ವೇಳಾಪಟ್ಟಿಗೆ ಅನುಗುಣವಾಗಿ **ದಿನಾಂಕ 20-02-2017ರ** ಒಳಗಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

3) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು:

1. ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.
2. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಿರಬಾರದು.
3. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.
4. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.
5. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ **ರೂ.28.80** ಲಕ್ಷಗಳ ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.
6. ಸಂಸ್ಥೆ / ಟ್ರಸ್ಟ್‌ನ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.

7. ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿ ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಕನಿಷ್ಠ 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು.

8. ಸದರಿ 25000 ಚದರ ಅಡಿಗಳ ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ ಪದನಾಮದಲ್ಲಿ ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಇರಬಾರದು.

9. ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ ಭೋಗ್ಯಕ್ಕೆ ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಠ 30 ವರ್ಷಗಳ ಅವಧಿಗೆ ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. ಹಾಗೂ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು. ಪ್ರಸ್ತುತ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿನಲ್ಲಿರಬೇಕು.

10. ನೋಟರಿಯವರ ಸಮ್ಮುಖದಲ್ಲಿ ಸ್ವೇರಿಂಗ್ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

11. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ / ಕಟ್ಟಡದಲ್ಲಿ ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳಿರಬೇಕು.

4) 2017-18ನೇ ಸಾಲಿನಲ್ಲಿಯೇ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಹಾಗೂ ಅನುಬಂಧದ ಮಾಹಿತಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸದಿದ್ದಲ್ಲಿ, ತಪಾಸಣಾ ಸಮಿತಿಗೆ ಸ್ಥಳ ಪರಿಶೀಲನೆ ನಡೆಸುವ ಕುರಿತು ಸೂಚನೆ ನೀಡದೆ, ಈ ಹಂತದಲ್ಲಿಯೇ 2017-18ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

5) ಕಾಲೇಜಿನ ನಿವೇಶನ, ಕಟ್ಟಡ ಮತ್ತು ಇರಬೇಕಾದ ಮೂಲಭೂತ ಸೌಲಭ್ಯಗಳ ಕುರಿತು ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ಮತ್ತು ತಪಾಸಣೆ ನಡೆಸಿ ವರದಿ ನೀಡುವ ಸಂಬಂಧ ಸಿದ್ಧಪಡಿಸಿರುವ ನಮೂನೆ-5 ರಲ್ಲಿ ವಿವರಿಸಲಾಗಿದೆ

..4

6) ಉಲ್ಲೇಖದೊಂದಿಗೆ ಸಲ್ಲಿಸಿರುವ ಅರ್ಜಿಯೊಂದಿಗೆ ರೂ.36,000/- ಪಾವತಿಸಿರುವ ಚಲನ್‌ನ ಮೂಲ ಪ್ರತಿಯನ್ನು ಸಲ್ಲಿಸದೇ ಇರುವವರು ಪ್ರಸ್ತಾವನೆಯೊಂದಿಗೆ ಮೂಲ ಚಲನ್‌ನ್ನು ಸಲ್ಲಿಸುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು,
(ಮಾನ್ಯತೆ ಮತ್ತು ಅನುದಾನ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-
1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ಕಛೇರಿ ಪ್ರತಿ.

ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಕಛೇರಿಯ Letter of intent ನ್ನು ಆನ್‌ಲೈನ್ ಅರ್ಜಿ ಸಲ್ಲಿಸಿರುವವರು ಮಾತ್ರ ದಿನಾಂಕ:20-02-2017ರ ಒಳಗಾಗಿ "ಜಂಟಿ ನಿರ್ದೇಶಕರು(ಮಾನ್ಯತೆ ಮತ್ತು ಅನುದಾನ), ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು-12." ಇವರಿಗೆ ಸಲ್ಲಿಸಲು ತಿಳಿಸಿದೆ.

## ಅನುಬಂಧ

**ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗೆ ನಿವೇಶನ, ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿಸಲಾಗಿರುವ ಬಗ್ಗೆ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯು ರೂ.100/-ರ ಇ-ಸ್ಟಾಂಪ್ ಪೇಪರ್‌ನಲ್ಲಿ ಸಲ್ಲಿಸಬೇಕಾದ ಪ್ರಮಾಣ ಪತ್ರ**

| | |
|---|---|
| 1 | . . . . . . . . . . . . . . . . ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿಗಳಾದ ನಾವು . . . . . . . . . . . . . . . . . . ., ಈ ವಿಳಾಸದಲ್ಲಿ (Form-I ರಲ್ಲಿ ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ) ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸಿರುವ ಅರ್ಜಿಗೆ ಅನುಗುಣವಾಗಿ, ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಸಂಖ್ಯೆ: . . . . . . . ದಿನಾಂಕ . . . . . ರಲ್ಲಿ Letter of intent ನೀಡಿರುತ್ತಾರೆ. |
| 2 | ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ ಪ್ರತ್ಯೇಕವಾಗಿ 25,000 ಚದರ ಅಡಿಗಳ / 25000 ಚದರ ಅಡಿಗಳಿಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನವನ್ನು acquire ಮಾಡಲಾಗಿದೆ. ಸದರಿ ನಿವೇಶನವನ್ನು ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ. . . . . . . . . . . . ನೋಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ . . . . . .ರಂದು ನೋಂದಾಯಿಸಲಾಗಿದೆ. ಸದರಿ ನಿವೇಶನವು ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ (ಪದನಾಮದ) ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ನಿವೇಶನದಲ್ಲಿ ನಿಯಮಗಳನ್ವಯ ಶೈಕ್ಷಣಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಅಗತ್ಯ ಕಟ್ಟಡ ನಿರ್ಮಿಸಿದ್ದು, ನಿವೇಶನ ಮತ್ತು ಕಟ್ಟಡದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲಾಗಿದೆ. |
| 3 | ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ ಮತ್ತು ಕಟ್ಟಡವು ಪ್ರಸ್ತುತ ಸಂಸ್ಥೆಯ ಆಡಳಿತ ಮಂಡಳಿಯ ಸ್ವಾಧೀನಾನುಭವದಲ್ಲಿದ್ದು, ಪ್ರಸ್ತುತ ವರ್ಷದವರೆಗೆ ನಿಗದಿತ ಕಂದಾಯವನ್ನು ಪಾವತಿಸಲಾಗಿದೆ. |
| 4 | ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು 2017-18ನೇ ಶೈಕ್ಷಣಿಕ ಸಾಲಿನಿಂದಲೇ ಪ್ರಾರಂಭಿಸಲು ನಿಯಮಗಳನ್ವಯ ಅಗತ್ಯ ಸಿದ್ಧತೆ ಮಾಡಿಕೊಂಡಿರುವುದರಿಂದ, ನಿಯಮ 4(4) ರನ್ವಯ ಈ ಮಾಹಿತಿಯನ್ನು ಇಲಾಖೆಗೆ ಸಲ್ಲಿಸಲಾಗಿದೆ. |
| 5 | ಮೇಲ್ಕಂಡ ಮಾಹಿತಿಯು ಸತ್ಯವಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ. |

| | |
|---|---|
| ಅಧ್ಯಕ್ಷರ ಸಹಿ | ಕಾರ್ಯದರ್ಶಿಯ ಸಹಿ |
| ಹೆಸರು: | ಹೆಸರು: |
| ದಿನಾಂಕ: | ದಿನಾಂಕ: |
| ಮೊಹರು | ಮೊಹರು |

## ಅನುದಾನ ರಹಿತ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಅರ್ಜಿ ಸಲ್ಲಿಸಿದ ನಂತರ, ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ-4 ರಂತೆ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ - ನಮೂನೆ - 5

| | | | |
|---|---|---|---|
| 1 | | ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಯ / ಟ್ರಸ್ಟ್‌ನ ಹೆಸರು ಮತ್ತು ಪೂರ್ಣ ವಿಳಾಸ | |
| 2 | | ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಪೂರ್ಣ ವಿಳಾಸ: (ವಿಳಾಸವು Form-I ರಲ್ಲಿ ನೀಡಿರುವ ವಿಳಾಸವೇ ಆಗಿರಬೇಕು) | |
| 3 | 1 | ಈ ಪದವಿ ಪೂರ್ವ ಕಾಲೇಜಿಗೆ ಪ್ರತ್ಯೇಕ ಕಟ್ಟಡವಿದೆಯೇ? | |
| | 2 | ಈ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕಟ್ಟಡದಲ್ಲಿ ಇತರ ಕೋರ್ಸುಗಳ / ಶಾಲಾ ಕಾಲೇಜುಗಳನ್ನು ನಡೆಸಲಾಗುತ್ತಿದೆಯೇ? (ನಡೆಸುತ್ತಿದ್ದಲ್ಲಿ ವಿವರಗಳನ್ನು ಸಲ್ಲಿಸುವುದು) | |

| ಕ್ರ | ಶಾಲಾ ಕಾಲೇಜಿನ ಬಗೆ | ಶಾಲೆ / ಕಾಲೇಜುಗಳ ಹೆಸರು |
|---|---|---|
| | | |
| | | |
| | | |
| | | |

| | | | |
|---|---|---|---|
| 3 | 3 | ಈ ಪದವಿ ಪೂರ್ವ ಕಾಲೇಜನ್ನು ಸಾಮಾನ್ಯ ವೇಳೆಯಲ್ಲಿ ನಡೆಸಲಾಗುವುದೇ? ಅಥವಾ ಪಾಳಿ ಪದ್ಧತಿಯಲ್ಲಿ ನಡೆಸಲಾಗುವುದೇ? | |
| 4 | | ಪ್ರೌಢಶಾಲೆಯನ್ನೊಳಗೊಂಡಂತೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲಾಗುವುದೇ ಅಥವಾ ಪ್ರತ್ಯೇಕವಾಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲಾಗುವುದೇ? | |
| 5 | | ಇದು ಬಾಲಕರ ಅಥವಾ ಬಾಲಕಿಯರ ಅಥವಾ ಬಾಲಕ-ಬಾಲಕಿಯರ ಪದವಿ ಪೂರ್ವ ಕಾಲೇಜೆ? | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

| ನಮೂನೆ – 5 | | | |
|---|---|---|---|
| 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5 | | | |
| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |

| | | | |
|---|---|---|---|
| 6 | 1 | ಕಾಲೇಜಿನ ನಿವೇಶನದ ಒಟ್ಟು ವಿಸ್ತೀರ್ಣ (ಚದರ ಅಡಿಗಳಲ್ಲಿ)<br>**(ಕನಿಷ್ಟ 25,000 ಚದರ ಅಡಿಗಳ ನಿವೇಶನವಿರಬೇಕು)** | |
| | 2 | ಕಟ್ಟಡದ ವಿಸ್ತೀರ್ಣ ಮತ್ತು ಕಟ್ಟಡದ ಪ್ಲಿಂತ್ ಏರಿಯಾ (ಚದರ ಅಡಿಗಳಲ್ಲಿ) | |
| | 3 | ಕಟ್ಟಡದಲ್ಲಿ ಇರುವ ಅಂತಸ್ತುಗಳ ಸಂಖ್ಯೆ | |
| 7 | | ಈ ಪದವಿ ಪೂರ್ವ ಕಾಲೇಜಿಗೆ ಸ್ವಂತ ಆಟದ ಮೈದಾನವಿದೆಯೇ? ಇದ್ದಲ್ಲಿ ಅದರ ವಿಸ್ತೀರ್ಣ (ಚದರ ಅಡಿಗಳಲ್ಲಿ) | |
| 8 | | ಈ ಕಾಲೇಜಿಗೆ ಒದಗಿಸಿರುವ ನಿವೇಶನ / ಜಮೀನು / ಕಟ್ಟಡ ಆಡಳಿತ ಮಂಡಳಿಯ ಸ್ವಾಧೀನ ಅನುಭವದಲ್ಲಿದೆಯೇ? ದಾಖಲೆ ಸಲ್ಲಿಸುವುದು. | |
| 9 | | ನಿವೇಶನ ಮತ್ತು ಕಟ್ಟಡ ಸ್ವಂತದ್ದಾಗಿದ್ದಲ್ಲಿ ಇದು ಆಡಳಿತ ಮಂಡಳಿಯ ಹೆಸರಿನಲ್ಲಿದೆಯೇ? ದಾಖಲೆ ಪತ್ರಗಳನ್ನು ಸಲ್ಲಿಸುವುದು (ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿಯ ಪದನಾಮದಲ್ಲಿ ನೋಂದಣಿ ಆಗಿರಬೇಕು) | |
| 10 | | ನಿವೇಶನವನ್ನು ಸಂಸ್ಥೆ/ಟ್ರಸ್ಟ್ ಯಾವ ರೀತಿ acquire ಮಾಡಿಕೊಂಡಿದೆ? ಸರ್ಕಾರದಿಂದ ಮಂಜೂರಾದ ನಿವೇಶನವೇ? ಅಥವಾ ಖಾಸಗಿ ವ್ಯಕ್ತಿಗಳಿಂದ ಪಡೆದ ನಿವೇಶನವೇ? ನಿವೇಶನವು ಹಿಂದಿನ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿರುವ ದಾಖಲೆ ಪತ್ರಗಳನ್ನು ಸಲ್ಲಿಸುವುದು. | |
| 11 | | ಕಾಲೇಜಿನ ಕಟ್ಟಡವನ್ನು ನಿರ್ಮಿಸುವ ಮುನ್ನ ಸದರಿ ಕಟ್ಟಡವನ್ನು ಶೈಕ್ಷಣಿಕ ಚಟುವಟಿಕೆಯ ಉದ್ದೇಶಕ್ಕಾಗಿ ನಿರ್ಮಿಸಲಾಗುತ್ತಿದೆ ಎಂದು ಸಕ್ಷಮ ಪ್ರಾಧಿಕಾರದಿಂದ ಪ್ಲಾನ್ ಅಪ್ರೂವಲ್ ಪಡೆಯಲಾಗಿದೆಯೇ? ಪ್ಲಾನ್ ಅಪ್ರೂವಲ್ ಪ್ರತಿ ಸಲ್ಲಿಸುವುದು. | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

| ನಮೂನೆ – 5 | | | |
|---|---|---|---|
| 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5 | | | |
| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |

| | | |
|---|---|---|
| 12 | ಕಟ್ಟಡವನ್ನು ಅನುಮೋದಿತ ನಕ್ಷೆಯ ಪ್ರಕಾರ ನಿರ್ಮಿಸಲಾಗಿದೆಯೇ? ಸಕ್ಷಮ ಅಧಿಕಾರಿಯು ನೀಡಿರುವ ಪ್ರಮಾಣ ಪತ್ರ ಸಲ್ಲಿಸುವುದು | |
| 13 | ಕಾಲೇಜನ್ನು ಪ್ರಾರಂಭಿಸಲು ಇಚ್ಚಿಸಿರುವ ಕಟ್ಟಡದ ಕಾಮಗಾರಿ ಪೂರ್ಣಗೊಂಡಿರುವ ಕುರಿತು ಸಂಬಂಧಿಸಿದ ಪ್ರಾಧಿಕಾರದಿಂದ completion certificate ಮತ್ತು Occupancy certificate / possession certificate ಪಡೆದು ಸಲ್ಲಿಸಲಾಗಿದೆಯೇ? | |
| 14 | ಕಟ್ಟಡ / ನಿವೇಶನಕ್ಕೆ ಪ್ರಸ್ತುತ ವರ್ಷದಲ್ಲಿ ಕಂದಾಯ ಪಾವತಿಸಿರುವ ಬಗ್ಗೆ ರಸೀದಿಗಳ ಪ್ರತಿ ಸಲ್ಲಿಸುವುದು | |
| 15 | ಕಟ್ಟಡದ / ನಿವೇಶನದ ಪ್ರಸ್ತುತ ಅವಧಿಯ ಆರ್‌ಟಿಸಿ ( Rrecord of rights, tenancy and crops) ಸಲ್ಲಿಸುವುದು | |
| 16 | ಸದರಿ ಕಟ್ಟಡವು ಶೈಕ್ಷಣಿಕ ಚಟುವಟಿಕೆ ನಡೆಸಲು ಅಂದರೆ ಕಾಲೇಜು ನಡೆಸಲು ಯೋಗ್ಯವಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸಲಾಗಿದೆಯೇ? | |
| 17 | ಕಟ್ಟಡ ಕಾಮಗಾರಿಯ ಗುಣಮಟ್ಟವನ್ನು ಸಕ್ಷಮ ಪ್ರಾಧಿಕಾರದ ಅಧಿಕೃತ ಅಧಿಕಾರಿಯು ದೃಢೀಕರಿಸಿರುವ ಪತ್ರ / ದಾಖಲೆ ಸಲ್ಲಿಸುವುದು | |
| 18 | ಉದ್ದೇಶಿತ ಕಾಲೇಜು ಕಟ್ಟಡದಲ್ಲಿ ಆಕಸ್ಮಿಕ ಬೆಂಕಿ ಅಪಘಾತ ಸಂಭವಿಸಿದಲ್ಲಿ ನಿಯಮಗಳ ಅನುಸಾರ ಮುಂಜಾಗ್ರತೆ ಕ್ರಮಗಳಾಗಿ ಬೆಂಕಿ ನಂದಿಸುವ ಉಪಕರಣಗಳನ್ನು ಅಳವಡಿಸಲಾಗಿದೆಯೇ? | |
| 19 | ಬೆಂಕಿ ನಂದಿಸುವ ಉಪಕರಣಗಳನ್ನು ಅಳವಡಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಪಡೆಯಲಾಗಿದೆಯೇ? | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

| ನಮೂನೆ – 5 | | | |
|---|---|---|---|
| 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5 | | | |
| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |

| 20 | ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ ಭೋಗ್ಯಕ್ಕೆ ಪಡೆದಿದ್ದಲ್ಲಿ ವಿವರ (ಭೋಗ್ಯದ ಕರಾರನ್ನು ಕನಿಷ್ಟ 30 ವರ್ಷಗಳ ಅವಧಿಗೆ ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು) (ಭೋಗ್ಯದ ಕರಾರು ನೋಂದಣಿ ಪತ್ರದ ದೃಢೀಕೃತ ಪ್ರತಿ ಸಲ್ಲಿಸುವುದು) | |
|---|---|---|
| 1 | ಭೋಗ್ಯಕ್ಕೆ ಪಡೆದಿರುವ ನಿವೇಶನದ / ಕಟ್ಟಡದ ಮಾಲೀಕರ ಹೆಸರು ಮತ್ತು ಪೂರ್ಣ ವಿಳಾಸ | |
| 2 | ಭೋಗ್ಯಕ್ಕೆ ಪಡೆದಿರುವ ನಿವೇಶನ / ಕಟ್ಟಡವು ಮಾಲೀಕರ ಹೆಸರಿನಲ್ಲಿರುವ ಬಗ್ಗೆ ನಿವೇಶನ / ಕಟ್ಟಡದ Registration certificate, possession certificate, ಖಾತಾ ಪ್ರಮಾಣಪತ್ರ ಇತ್ಯಾದಿ ದಾಖಲೆಗಳನ್ನು ಸಲ್ಲಿಸುವುದು | |
| 3 | ಯಾವ ದಿನಾಂಕದಿಂದ / ವರ್ಷದಿಂದ ಭೋಗ್ಯಕ್ಕೆ ಪಡೆಯಲಾಗಿದೆ? | |
| 4 | ಭೋಗ್ಯದ ಕರಾರನ್ನು ಯಾವ ವರ್ಷದವರೆಗೆ /ದಿನಾಂಕದವರೆಗೆ / ಅವಧಿಗೆ ಮಾಡಲಾಗಿದೆ? | |
| 5 | ಭೋಗ್ಯದ ಮೊತ್ತವೆಷ್ಟು? | |
| 6 | ಭೋಗ್ಯಕ್ಕೆ ಪಡೆದಿರುವ ಕರಾರು ಪತ್ರವನ್ನು – ಕಟ್ಟಡದ ಮಾಲೀಕ ಮತ್ತು ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿ / ಚೇರ್‌ಮನ್ ಇವರ ನಡುವೆ ನೋಂದಣಿ ಆಗಿದೆಯೇ? ವಿವರ ನೀಡುವುದು. | |
| 7 | ಭೋಗ್ಯದ ಕರಾರು ಪತ್ರವನ್ನು ನಿಯಮಗಳ ಅನ್ವಯ ನೋಂದಣಾಧಿಕಾರಿಯವರ ಕಛೇರಿಯಲ್ಲಿ / ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆಯೇ? | ಹೌದು / ಇಲ್ಲ<br>ನೋಂದಣಿ ಸಂಖ್ಯೆ:<br>ದಿನಾಂಕಃ<br>ಕಛೇರಿ: |
| 8 | ಭೋಗ್ಯದ ಕರಾರು ನೋಂದಣಿಯಾದ ನಂತರ ಸದರಿ ನಿವೇಶನ / ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಹೆಸರಿಗೆ ವರ್ಗಾವಣೆಯಾಗಿದ್ದು, ಪ್ರಸ್ತುತ ಖಾತಾ ಸಂಸ್ಥೆ / ಟ್ರಸ್ಟ್‌ನ ಹೆಸರಿನಲ್ಲಿದೆಯೇ? | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

## ನಮೂನೆ – 5

**2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5**

| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |
|---|---|---|---|

| | | | |
|---|---|---|---|
| 21 | | ಕಾಲೇಜಿನ ನಿವೇಶನ / ಜಮೀನು / ಕೃಷಿ ಭೂಮಿಯಾಗಿದೆಯೆ? ಆಗಿದ್ದಲ್ಲಿ, ಕೃಷಿ ಜಮೀನನ್ನು ಕೃಷಿಯೇತರ / ಶೈಕ್ಷಣಿಕ ಉದ್ಧೇಶಕ್ಕೆ ಭೂ ಪರಿವರ್ತನೆ ಮಾಡಿಸಿಕೊಳ್ಳಲಾಗಿದೆಯೇ? ದಾಖಲೆ ಸಲ್ಲಿಸುವುದು. | |
| 22 | 1 | ಕಟ್ಟಡದಲ್ಲಿ ನೀರಿನ ಸೌಲಭ್ಯ ಇದೆಯೇ? | |
| | 2 | ನೀರಿನ ಮೂಲಗಳು ಯಾವುವು? | ಕೊಳಾಯಿ/ನಳ :<br>ಕೊಳವೆ ಬಾವಿ : |
| | 3 | ಕನಿಷ್ಟ 1500 ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಇದೆಯೇ? | |
| | 4 | ನಿರಂತರ ನೀರಿನ ವ್ಯವಸ್ಥೆ ಇದೆಯೇ? | |
| | 5 | ಮೂತ್ರಾಲಯ ಹಾಗೂ ಶೌಚಾಲಯಗಳಿಗೆ ನಿರಂತರ ನೀರಿನ ಸೌಲಭ್ಯ ಇದೆಯೇ? | |
| 23 | 1 | ಶೌಚಾಲಯ ಸೌಲಭ್ಯಗಳ ವಿವರ<br>(ಒಮ್ಮೆಗೆ ಕನಿಷ್ಟ 10 ವಿದ್ಯಾರ್ಥಿಗಳು ಬಳಸುವಂತಿರಬೇಕು) | |

| ವಿವರ | ಕಾಲೇಜು ಸಿಬ್ಬಂದಿಗೆ | | ವಿದ್ಯಾರ್ಥಿಗಳಿಗೆ | | ಷರಾ |
|---|---|---|---|---|---|
| | ಪುರುಷರು | ಮಹಿಳೆಯರು | ಬಾಲಕರು | ಬಾಲಕಿಯರು | |
| ಮೂತ್ರಾಲಯಗಳ ಸಂಖ್ಯೆ | | | | | |
| ಶೌಚಾಲಯಗಳ ಸಂಖ್ಯೆ | | | | | |

| | | | |
|---|---|---|---|
| 23 | 2 | ಶೌಚಾಲಯಗಳು/ಮೂತ್ರಾಲಯಗಳು ನಿಗದಿತ ಸಂಖ್ಯೆಗೆ ಅನುಗುಣವಾಗಿ ಇವೆಯೇ? | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

## ನಮೂನೆ – 5

**2017–18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5**

| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |
|---|---|---|---|

24 ಪ್ರಸ್ತುತ ಕಾಲೇಜಿನಲ್ಲಿ ಬೋಧಿಸಲು ಇಚ್ಛಿಸಿರುವ ಭಾಷಾ ವಿಷಯಗಳು, ಐಚ್ಛಿಕ ವಿಷಯಗಳು, ಸಂಯೋಜನೆಗಳು ಮತ್ತು ವಿಭಾಗಗಳ ಮಾಹಿತಿ

| ಭಾಗ – 1 | ಕ್ರ | ಭಾಷೆಗಳು | ಭಾಷೆಗಳ ಸಂಕೇತ |
|---|---|---|---|
| | 1 | | |
| | 2 | | |
| | 3 | | |
| | 4 | | |
| | 5 | | |

| ಭಾಗ – 2 | ಕ್ರ | ಐಚ್ಛಿಕ ವಿಷಯಗಳು | ವಿಷಯಗಳ ಸಂಕೇತ |
|---|---|---|---|
| | 1 | | |
| | 2 | | |
| | 3 | | |
| | 4 | | |
| | 5 | | |
| | 6 | | |
| | 7 | | |
| | 8 | | |
| | 9 | | |
| | 10 | | |
| | 11 | | |
| | 12 | | |

ಸಂಯೋಜನೆಗಳು – ಸರ್ಕಾರವು ನಿಗದಿಪಡಿಸಿರುವ ಯಾವುದಾದರೂ ಅಧಿಕೃತ 03 ಸಂಯೋಜನೆಗಳಿಗೆ ಮಾತ್ರ ಅವಕಾಶವಿದೆ

| ಕ್ರ | ಸಂಯೋಜನೆಯಲ್ಲಿನ ವಿಷಯಗಳು | ವಿಷಯ ಸಂಕೇತ ಸಂಖ್ಯೆಗಳು | ವಿಭಾಗಗಳು |
|---|---|---|---|
| 1 | | | |
| 2 | | | |
| 3 | | | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

## ನಮೂನೆ – 5

**2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5**

| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |
|---|---|---|---|

25 ಪದವಿ ಪೂರ್ವ ಕಾಲೇಜಿನಲ್ಲಿ ಬೋಧಿಸಲು ಉದ್ದೇಶಿಸಿರುವ ಭಾಷೆ, ವಿಷಯ, ಸಂಯೋಜನೆ ಮತ್ತು ವಿಭಾಗಗಳಿಗೆ ಪೂರಕವಾಗಿ ಈ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ಪದವಿ ಪೂರ್ವ ತರಗತಿಗಳಿಗೆ ಮೀಸಲಿಟ್ಟಿರುವ ಪ್ರತ್ಯೇಕ ಕೊಠಡಿಗಳ ವಿವರ

| | ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ 09-10-2006ರ ಪ್ರಕಾರ ಇರಬೇಕಾದ ಮೂಲಭೂತ ಸೌಲಭ್ಯಗಳು (ಎರಡು ಭಾಷಾ ವಿಷಯಗಳು ಮತ್ತು 06 ಸೆಕ್ಷನ್‌ಗಳಿಗೆ ಮಾತ್ರ) | | | ಹಾಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು | | ಷರಾ |
|---|---|---|---|---|---|---|
| ಕ್ರಸ | ಕೊಠಡಿಗಳ ವಿವರ | ಕೊಠಡಿಗಳ ಅಳತೆ | ಕೊಠಡಿಗಳ ಸಂಖ್ಯೆ | ಕೊಠಡಿಗಳ ಅಳತೆ | ಕೊಠಡಿಗಳ ಸಂಖ್ಯೆ | |
| 1 | ಪ್ರಿನ್ಸಿಪಲ್‌ರ ಕೊಠಡಿ | 250 ಚ.ಅ | 01 | | | |
| 2 | ಕಛೇರಿ ಕೊಠಡಿ | 250 ಚ.ಅ | 01 | | | |
| 3 | ಉಪನ್ಯಾಸ ಕೊಠಡಿಗಳು | 22'x 30' | 06 | | | |
| 4 | ಉಪನ್ಯಾಸ ಕೊಠಡಿಗಳು (ಭಾಷಾ ವಿಷಯಕ್ಕೆ) | 22'x 30' | 02 | | | |
| 5 | ಉಪನ್ಯಾಸಕರ ಕೊಠಡಿ (ಸಿಬ್ಬಂದಿ ಕೊಠಡಿ) | 500 ಚ.ಅ | 01 | | | |
| 6 | ವಿದ್ಯಾರ್ಥಿನಿಯರ ನಿರೀಕ್ಷಣಾ ಕೊಠಡಿ (ಶೌಚಾಲಯವನ್ನೊಳಗೊಂಡ) | 500 ಚ.ಅ | 01 | | | |
| 7 | ಗ್ರಂಥಾಲಯ ಕೊಠಡಿ | 1000 ಚ.ಅ | 01 | | | |
| 8 | ವಾಚನಾಲಯ ಕೊಠಡಿ(ಕನಿಷ್ಠ 10000 ಪುಸ್ತಕಗಳಿರಬೇಕು) | 1000 ಚ.ಅ | 01 | | | |
| 9 | ಭೌತಶಾಸ್ತ್ರ ಪ್ರಯೋಗಾಲಯ ಕೊಠಡಿ | 24'x 60' | 01 | | | |
| 10 | ರಸಾಯನಶಾಸ್ತ್ರ ಪ್ರಯೋಗಾಲಯ ಕೊಠಡಿ | 24'x 60' | 01 | | | |
| 11 | ಜೀವಶಾಸ್ತ್ರ ಪ್ರಯೋಗಾಲಯ ಕೊಠಡಿ | 24'x 60' | 01 | | | |
| 12 | ಎಲೆಕ್ಟ್ರಾನಿಕ್ಸ್ ಪ್ರಯೋಗಾಲಯ | 24'x 60' | 01 | | | |
| 13 | ಗಣಕ ವಿಜ್ಞಾನ ಪ್ರಯೋಗಾಲಯ | 24'x 60' | 01 | | | |
| 14 | ಕ್ರೀಡಾ ಕೊಠಡಿ | | 01 | | | |

ವಿ.ಸೂ:- ಕನಿಷ್ಠ 2 ಭಾಷಾ ವಿಷಯಗಳನ್ನೊಳಗೊಂಡಂತೆ ಪ್ರಥಮ ಪಿಯುಸಿಯಲ್ಲಿ 3 ಸೆಕ್ಷನ್ ಮತ್ತು ದ್ವಿತೀಯ ಪಿಯುಸಿಯಲ್ಲಿ 3 ಸೆಕ್ಷನ್ ಸೇರಿ ಒಟ್ಟು 6 ಸೆಕ್ಷನ್‌ಗಳಿರುವಲ್ಲಿ ಮೇಲಿನಂತೆ ಕೊಠಡಿಗಳಿರಬೇಕು. ಪ್ರತಿಯೊಂದು ಹೆಚ್ಚುವರಿ ಭಾಷಾ ವಿಷಯಕ್ಕೆ 01- ಹೆಚ್ಚುವರಿ ಉಪನ್ಯಾಸ ಕೊಠಡಿ ಮತ್ತು ಪ್ರತಿಯೊಂದು ಹೆಚ್ಚುವರಿ ವಿಷಯ/ಸಂಯೋಜನೆ/ವಿಭಾಗಕ್ಕೆ- 02- ಹೆಚ್ಚುವರಿ ಉಪನ್ಯಾಸ ಕೊಠಡಿಗಳಿರಬೇಕು)

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

## ನಮೂನೆ – 5

**2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5**

| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |
|---|---|---|---|

| | | | |
|---|---|---|---|
| 26 | | ವಿಜ್ಞಾನ ಉಪಕರಣಗಳು:- ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಎಲೆಕ್ಟ್ರಾನಿಕ್ಸ್ ವಿಷಯಗಳಿಗೆ (ಪಠ್ಯಕ್ರಮಕ್ಕನುಗುಣವಾಗಿ) ನಿಗದಿಪಡಿಸಿರುವ ಉಪಕರಣಗಳು ಇವೆಯೇ? | |
| 27 | | ಗಣಕ ವಿಜ್ಞಾನ ವಿಷಯಕ್ಕೆ (ಕನಿಷ್ಠ 10 ವಿದ್ಯಾರ್ಥಿಗಳಿಗೆ ಒಂದರಂತೆ) ಗಣಕ ಯಂತ್ರಗಳಿವೆಯೇ? | |
| 28 | | ಕಾಲೇಜು ನಿವೇಶನದಲ್ಲಿ – ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವಷ್ಟು ಬೈಸಿಕಲ್, ಮೋಪೆಡ್ ಮತ್ತು ಇತರೆ ವಾಹನಗಳನ್ನು ನಿಲ್ಲಿಸಲು ಸ್ಥಳಾವಕಾಶ (ಪಾರ್ಕಿಂಗ್ ಏರಿಯಾ) ಇದೆಯೇ? | |
| 29 | | ಕಾಲೇಜಿನ ಎಲ್ಲಾ ಕೊಠಡಿಗಳಲ್ಲಿ ವಿದ್ಯುತ್ ಸೌಲಭ್ಯ ಇದೆಯೇ? ಇದ್ದಲ್ಲಿ ಮೀಟರ್ ನಂಬರ್ (ಆರ್‌ಆರ್) ಕನ್ಸೂಮರ್ ನಂಬರ್ ಇತ್ತೀಚಿನ ಬಿಲ್ಲಿನ ಪ್ರತಿ ಸಲ್ಲಿಸುವುದು | |
| 30 | | ಕಾಲೇಜಿನ ಎಲ್ಲಾ ಕೊಠಡಿಗಳಲ್ಲಿ ಸಾಕಷ್ಟು ಗಾಳಿ ಮತ್ತು ಬೆಳಕು ಬರುವಂತಿದೆಯೇ? | |
| 31 | | ಕಾಲೇಜಿನಲ್ಲಿ ಅಗತ್ಯಕ್ಕೆ ತಕ್ಕಷ್ಟು ಅಲ್ಮೆರಾಗಳು, ರ್‍ಯಾಕ್‌ಗಳು ಇವೆಯೇ? | |
| 32 | 1 | ಎಲ್ಲಾ ವಿದ್ಯಾರ್ಥಿಗಳು ಕುಳಿತುಕೊಳ್ಳಲು ಅಗತ್ಯವಿರುವಷ್ಟು ಪೀಠೋಪಕರಣಗಳು (ಡೆಸ್ಕ್‌ಗಳು ಅಥವಾ ಟೇಬಲ್ / ಬೆಂಚ್‌ಗಳು ಇವೆಯೇ?) ಅವುಗಳ ಸಂಖ್ಯೆ ಎಷ್ಟು? | |
| | 2 | ಪ್ರತಿ ಕೊಠಡಿಯಲ್ಲಿ ಉಪನ್ಯಾಸಕರಿಗೆ ಪೀಠೋಪಕರಣಗಳನ್ನು ಒದಗಿಸಲಾಗಿದೆಯೇ? | |
| 33 | | ಕಾಲೇಜಿನ ಕಟ್ಟಡ ಮತ್ತು ನಿವೇಶನಕ್ಕೆ ಕಾಂಪೌಂಡ್ ನಿರ್ಮಿಸಲಾಗಿದೆಯೇ? ಇದ್ದಲ್ಲಿ ಯಾವ ರೀತಿಯ ಕಾಂಪೌಂಡ್ ನಿರ್ಮಿಸಲಾಗಿದೆ | |

ತಪಾಸಣಾ ಸಮಿತಿಯ ಸದಸ್ಯರ ಸಹಿ ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ ಮತ್ತು ಮೊಹರು

| ನಮೂನೆ – 5 | | | |
|---|---|---|---|
| 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5 | | | |
| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |

| | | |
|---|---|---|
| 34 | ಕಾಲೇಜಿನಲ್ಲಿ ಮಲ್ಟಿ ಮೀಡಿಯಾ ಉಪಕರಣಗಳು (ರೇಡಿಯೋ, ಟಿವಿ, ಆಡಿಯೋ, ವಿಡಿಯೋ, ಸ್ಲೈಡ್ ಪ್ರೊಜೆಕ್ಟರ್ಸ್, ಕಂಪ್ಯೂಟರ್ಸ್, ಇಂಟರ್‌ನೆಟ್, ಫ್ಯಾಕ್ಸ್ ಮತ್ತಿತರೆ) ಇದೆಯೇ? ಇವುಗಳು ವಿದ್ಯಾರ್ಥಿಗಳ ಬಳಕೆಗೆ ಲಭ್ಯವಿದೆಯೇ? | |
| 35 | ಕಾಲೇಜಿನ ಸುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿದೆಯೇ? ಈ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ ಸಲ್ಲಿಸುವುದು. | |
| 36 | ಉದ್ದೇಶಿತ ಕಾಲೇಜಿನ ನಿವೇಶನ / ಕಟ್ಟಡದ ಬಗ್ಗೆ ವ್ಯಾಜ್ಯ ಇದೆಯೇ? ನ್ಯಾಯಾಲಯಗಳಲ್ಲಿ ದಾವೆಗಳಿವೆಯೇ? ಇದ್ದಲ್ಲಿ ಮಾಹಿತಿ ನೀಡುವುದು | |
| 37 | ಉದ್ದೇಶಿಸಿತ ಕಾಲೇಜಿನ ನಿವೇಶನ / ಕಟ್ಟಡಕ್ಕೆ ಸಂಬಂಧಿಸಿದಂತೆ ವ್ಯಾಜ್ಯ ಮತ್ತು ನ್ಯಾಯಾಲಯಗಳಲ್ಲಿ ದಾವೆಗಳಿರುವುದಿಲ್ಲ ಎಂದು ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿ ನಿವೇಶನ / ಕಟ್ಟಡದ ಮಾಲೀಕರು ರೂ.100/-ರ ಇ-ಸ್ಟಾಂಪ್ ಹಾಳೆಯಲ್ಲಿ ಪ್ರಮಾಣ ಪತ್ರ ಸಲ್ಲಿಸುವುದು. | |
| 38 | ಕಾಲೇಜಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳನ್ನು ನಡೆಸಲು ನಿಯಮಗಳನ್ವಯ ಅರ್ಹ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಮಾಹಿತಿ ಒದಗಿಸಲಾಗಿದೆಯೇ? | |
| 39 | ಕಾಲೇಜಿನ ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳ ಫೋಟೋಗಳನ್ನು ಸಲ್ಲಿಸುವುದು. (ಕಾಲೇಜಿನ ಮೂಲಭೂತ ಸೌಲಭ್ಯಗಳ ಬಗ್ಗೆ ಕಾಲೇಜು ಕಟ್ಟಡದ, ಪ್ರತಿ ಕೊಠಡಿಯ, ಆಟದ ಮೈದಾನದ ಮೂತ್ರಾಲಯ/ಶೌಚಾಲಯಗಳ, ನೀರಿನ, ವಿದ್ಯುಚ್ಛಕ್ತಿ ವ್ಯವಸ್ಥೆಯ ಬಗ್ಗೆ ಇತ್ತೀಚಿನ ಫೋಟೋಗಳು. (ಫೋಟೋಗಳಲ್ಲಿ ಕಾಲೇಜಿನ ಹೆಸರು ಮತ್ತು ಕೊಠಡಿ ಸಂಖ್ಯೆ ಹಾಗೂ ಕೊಠಡಿಯ ಬಳಕೆ ಬಗ್ಗೆ ವಿವರಗಳಿರಬೇಕು) (ಫೋಟೋಗಳಲ್ಲಿ ಆಡಳಿತ ಮಂಡಳಿಯ ಅಧಿಕೃತ ಅಧಿಕಾರಿ ಮತ್ತು ಸಿಬ್ಬಂದಿ, ತಪಾಸಣಾ ಸಮಿತಿಯ ಸದಸ್ಯರು ಇರಬೇಕು) ಫೋಟೋಗಳನ್ನು ಆಡಳಿತ ಮಂಡಳಿಯವರು ಮತ್ತು ಜಿಲ್ಲಾ ತಪಾಸಣಾ ಸಮಿತಿಯ ಇಬ್ಬರೂ ಸದಸ್ಯರು ದೃಢೀಕರಿಸಿರಬೇಕು. | |

ತಪಾಸಣಾ ಸಮಿತಿಯ ಸದಸ್ಯರ ಸಹಿ
ಮತ್ತು ಮೊಹರು

ತಪಾಸಣಾ ಸಮಿತಿಯ ಅಧ್ಯಕ್ಷರ ಸಹಿ
ಮತ್ತು ಮೊಹರು

## ನಮೂನೆ – 5

**2017-18ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಜಿಲ್ಲಾ ತಪಾಸಣಾ ಸಮಿತಿಯು ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ವರದಿ ಸಲ್ಲಿಸುವ – ನಮೂನೆ – 5**

| ಸಂಸ್ಥೆ/ಟ್ರಸ್ಟ್‌ನ ಹೆಸರು | | ಕಾಲೇಜಿನ ವಿಳಾಸ | |
|---|---|---|---|

40) ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ನಡೆಸಿದ ದಿನಾಂಕ

41) ತಪಾಸಣಾ ಸಮಯದಲ್ಲಿ ಹಾಜರಿದ್ದ ಸಂಸ್ಥೆಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ ವಿವರ

| ಕ್ರ | ಹೆಸರು, ಹುದ್ದೆ / ಪದನಾಮ ಮತ್ತು ವಿಳಾಸ | ಸಹಿ ಮತ್ತು ಮೊಹರು |
|---|---|---|
| 1 | | |
| 2 | | |

42) **ಸಾಕ್ಷಿದಾರರ ವಿವರ**

(ತಪಾಸಣಾ ಸಮಯದಲ್ಲಿ ಸಂಸ್ಥೆ/ಟ್ರಸ್ಟ್‌ನವರು ತೋರಿಸುವ ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ/ಕಟ್ಟಡವು, ಈ ನಮೂನೆಯಲ್ಲಿ ನಮೂದಿಸಿರುವ ವ್ಯಕ್ತಿಗೆ/ಗಳಿಗೆ/ಸಂಸ್ಥೆಗೆ ಸೇರಿದ್ದಾಗಿದೆ ಎಂಬ ಬಗ್ಗೆ ನಿವೇಶನ/ಕಟ್ಟಡದ ಸುತ್ತಲಿನಲ್ಲಿ/ ಸಮೀಪದಲ್ಲಿ ವಾಸವಿರುವ/ವ್ಯವಹಾರ ನಡೆಸುತ್ತಿರುವ ಕನಿಷ್ಠ ಇಬ್ಬರು ಸಾರ್ವಜನಿಕರಿಂದ ಸಾಕ್ಷಿಯನ್ನು ಪಡೆಯುವುದು.

| ಕ್ರ | ಸಾಕ್ಷಿದಾರರ ಹೆಸರು ಹುದ್ದೆ/ಪದನಾಮ ಮತ್ತು ವಿಳಾಸ | ಸಹಿ ಮತ್ತು ಮೊಹರು |
|---|---|---|
| 1 | | |
| 2 | | |

43) **ದೃಢೀಕರಣ**

(ಸಂಸ್ಥೆ/ಟ್ರಸ್ಟ್‌ನವರು ತೋರಿಸಿರುವ ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ/ಕಟ್ಟಡವನ್ನು ಪರಿಶೀಲಿಸಿ, ಅವರು ಒದಗಿಸಿರುವ ಮಾಹಿತಿ / ದಾಖಲೆಗಳನ್ನು ಖುದ್ದಾಗಿ ಪರಿಶೀಲಿಸಿ, ಯಾವುದೇ ಮಾಹಿತಿಯನ್ನು ಮರೆಮಾಡದೆ, ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮೇಲಿನಂತೆ ಮಾಹಿತಿಯನ್ನು ನಿಖರವಾಗಿ ನೀಡಿರುತ್ತೇವೆ. ಸದರಿ ಮಾಹಿತಿಯು ಸರಿಯಾಗಿದೆಯೆಂದು ಈ ಮೂಲಕ ದೃಢೀಕರಿಸುತ್ತೇವೆ. ಮೇಲೆ ನೀಡಿರುವ / ನಮೂದಿಸಿರುವ ಮಾಹಿತಿಯು ಮುಂದೆ ಸುಳ್ಳೆಂದು ಕಂಡುಬಂದಲ್ಲಿ ಸರ್ಕಾರ / ಇಲಾಖೆ ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಬದ್ಧರಾಗಿರುತ್ತೇವೆ. (ಯಾವುದೇ ಕಾರಣಕ್ಕೂ ಯಾವುದೇ ರೀತಿಯ ಶಿಫಾರಸು ಮಾಡಬಾರದು)

| ಕ್ರ | ತಪಾಸಣಾ ಸಮಿತಿಯ ಅಧ್ಯಕ್ಷರ / ಸದಸ್ಯರ ಹೆಸರು ಹುದ್ದೆ/ಪದನಾಮ ಮತ್ತು ವಿಳಾಸ | ಸಹಿ ಮತ್ತು ಮೊಹರು |
|---|---|---|
| 1 | | |
| 2 | | |